ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2019
ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 17.03.2022
ಉತ್ತರಿಸಬೇಕಾದ ಸಚಿವರು : ಮುಖ್ಯಮಂತ್ರಿರವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಬೆಂಗಳೂರಿನ ಇಂದಿರಾ ನಗರದಲ್ಲಿರುವ ಬಿ.ಡಿ.ಎ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳ ಸಂಖ್ಯೆ ಎಷ್ಟು; ಎಷ್ಟು ಮಳಿಗೆಗಳನ್ನು ಬಾಡಿಗೆಗೆ ಕೊಡಲಾಗಿದೆ; ಇವುಗಳಲ್ಲಿ ಖಾಲಿಯಿರುವ ಮಳಿಗೆಗಳು ಎಷ್ಟು; ಈ ವಾಣಿಜ್ಯ ಸಂಕೀರ್ಣದಿಂದ ಸರ್ಕಾರಕ್ಕೆ ಪ್ರತಿ ವರ್ಷ ಬರುತ್ತಿರುವ ಆದಾಯ ಎಷ್ಟು;	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಇಂದಿರಾನಗರದಲ್ಲಿರುವ ಬಿಡಿಎ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳ ವಿವರ ಕೆಳಕಂಡಂತಿದೆ. (see table below)
ಆ	ಇತ್ತೀಚಿಗೆ ಈ ವಾಣಿಜ್ಯ ಸಂಕೀರ್ಣವು ಶಿಥಲಾವಸ್ಥೆಯನ್ನು ತಲುಪಿದ್ದು, ಪುಂಡರು ಪೋಕರಿಗಳ ಅವಾಸ ಸ್ಥಾನವಾಗಿ ಕಾನೂನು ಬಾಹಿರ ಚಟುವಟಿಕೆಗಳ ಕೇಂದ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಇಂದಿರಾ ನಗರ ವಾಣಿಜ್ಯ ಸಂಕೀರ್ಣವು ಶಿಥಿಲವಾಗಿರುವುದರಿಂದ ಇಂದಿರಾ ನಗರ ವಾಣಿಜ್ಯ ಸಂಕೀರ್ಣವನ್ನು ಪಿಪಿಪಿ ಯೋಜನೆ ಅಡಿಯಲ್ಲಿ ಕೈಗೆತ್ತಿಕೊಳ್ಳಲು ಪ್ರಾಧಿಕಾರದಿಂದ ಟೆಂಡರ್ ಕರೆದು ಟೆಂಡರ್ ನಲ್ಲಿ ಭಾಗವಹಿಸಿ ಪ್ರಾಧಿಕಾರಕ್ಕೆ ಹೆಚ್ಚಿನ ಕಟ್ಟಡ ಪ್ರದೇಶವನ್ನು ನೀಡುವುದಾಗಿ ಟೆಂಡರ್ ನಲ್ಲಿ ನಮೂದಿಸಿದ M/s M.K. Embassy Land Developers Pvt Ltd., ರವರೊಂದಿಗೆ ದಿನಾಂಕ:22/03/2018 ರಂದು Concession Agreement ಮಾಡಿಕೊಳ್ಳಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಇಂದಿರಾ ನಗರ ವಾಣಿಜ್ಯ ಸಂಕೀರ್ಣದ ರಿಯಾಯಿತಿದಾರರಾದ M/s M.K. Embassy Land Developers Pvt Ltd., ರವರು ಸಂಕೀರ್ಣದ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುತ್ತಿರುತ್ತಾರೆ ಜೊತೆಯಲ್ಲಿ 2 ಸಂಖ್ಯೆಯ ಮೇಲ್ವಿಚಾರಕರು, 16 ಭದ್ರತಾ ಸಿಬ್ಬಂದಿಯನ್ನು 2 ಪಾಳಿಯಲ್ಲಿ ನಿಯೋಜಿಸಿದ್ದು, ಸದರಿ ಸಿಬ್ಬಂದಿಯವರು ಇಂದಿರಾ ನಗರ ವಾಣಿಜ್ಯ ಸಂಕೀರ್ಣವನ್ನು 24x7 ಕಾವಲು ಕಾಯುತ್ತಿರುತ್ತಾರೆ. ಸದರಿ ಪ್ರದೇಶದಲ್ಲಿ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುವುದಿಲ್ಲ.

ಕ್ರಮ ಸಂ	ಒಟ್ಟು ಮಳಿಗೆಗಳ ಸಂಖ್ಯೆ:	ಬಾಡಿಗೆಗೆ ಉಪಯೋಗಿಸಿ ಕೊಂಡಿರುವ ಮಳಿಗೆಗಳ ಸಂಖ್ಯೆ:	ಖಾಲಿಯಿರುವ ಮಳಿಗೆಗಳ ಸಂಖ್ಯೆ:	ಮಳಿಗೆಗಳ ವಾರ್ಷಿಕ ಬೇಡಿಕೆ ರೂಪಾಯಿಗಳಲ್ಲಿ
1	91	43	48	6917100.00
2	42	25	17	674136.00
ಒಟ್ಟು	133	68	65	7591236.00

..2

ಇ	ಸದರಿ ವಾಣಿಜ್ಯ ಸಂಕೀರ್ಣವು ತುಂಬಾ ಶಿಥಿಲವಾಗಿರುವುದರಿಂದ, ಈ ಕಟ್ಟಡಗಳನ್ನು ಕೆಡವಿ ನೂತನ ವಾಣಿಜ್ಯ ಸಂಕೀರ್ಣವನ್ನು ನಿರ್ಮಾಣ ಮಾಡುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ; ಹೊಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಇಂದಿರಾ ನಗರ ವಾಣಿಜ್ಯ ಸಂಕೀರ್ಣವನ್ನು 1982 ಇಸವಿಯಲ್ಲಿ 23792.96 ಚ.ಮೀ ರಲ್ಲಿ ಕೇವಲ 0.40 ಎಫ್.ಎ.ಆರ್. ರಷ್ಟು ಉಪಯೋಗಿಸಿಕೊಂಡು ಒಟ್ಟು 3 ಬ್ಲಾಕ್ ಗಳಾಗಿ ನಿರ್ಮಿಸಲಾಗಿತ್ತು. ಪ್ರಸ್ತುತ ಸದರಿ ಕಟ್ಟಡಗಳು ಶಿಥಿಲವಾಗಿರುವುದರಿಂದ ಮತ್ತು ಎಫ್.ಎ.ಆರ್ 3.25 ಅನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದರಿಂದ ಕಟ್ಟಡದ ವಿಸ್ತೀರ್ಣವು ಹೆಚ್ಚಾಗುವ ಹಾಗೂ ಪ್ರಾಧಿಕಾರಕ್ಕೆ ಆದಾಯವು ಹೆಚ್ಚಾಗುವುದರಿಂದ ಪ್ರಾಧಿಕಾರದ ಮಂಡಳಿಯ ಸಭೆ ದಿನಾಂಕ: 27.09.2014 ರ ನಿರ್ಣಯದಂತೆ ಸದರಿ ವಾಣಿಜ್ಯ ಸಂಕೀರ್ಣವನ್ನು ಪುನರ್ ನಿರ್ಮಾಣ ಮಾಡಲು ಪಿಪಿಪಿ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ದಿನಾಂಕ: 23.08.2017 ರಂದು ಟೆಂಡರ್ ಆಹ್ವಾನಿಸಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ರಿಯಾಯಿತಿದಾರರಾದ M/s M.K. Embassy Land Developers Pvt Ltd., ರವರು ನಿರ್ಮಾಣ ಮಾಡುವ ಸಂಕೀರ್ಣದಲ್ಲಿ ಪ್ರಾಧಿಕಾರಕ್ಕೆ ಹೆಚ್ಚಿನ ಕಟ್ಟಡ ಪ್ರದೇಶವನ್ನು ನೀಡುವುದಾಗಿ ನಮೂದಿಸಿರುವುದರಿಂದ ಸದರಿಯವರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಪ್ರಾಧಿಕಾರದ ಮಂಡಳಿಯ ಸಭೆಯ ವಿಷಯ ಸಂಖ್ಯೆ: 63/18 ದಿನಾಂಕ: 05.03.2018 ರಲ್ಲಿ ನಿರ್ಣಯಿಸಲಾಗಿರುತ್ತದೆ. ಸದರಿ ಯೋಜನೆಯ ಕುರಿತು ಸಾರ್ವಜನಿಕರಿಂದ ದೂರುಗಳು ಹಾಗೂ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿರುವ ಹಿನ್ನೆಲೆಯಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ವಿವರವಾದ ಪರಿಶೀಲನೆ ಅಗತ್ಯವೆಂದು ಕಂಡುಬಂದಿರುವುದರಿಂದ ತಕ್ಷಣದಿಂದಲೇ ಜಾರಿಗೆ ಬರುವಂತೆ ಈ ಟೆಂಡರ್ ಪ್ರಕ್ರಿಯೆಯನ್ನು ತಡೆಹಿಡಿದು ಈ ಸಂಬಂಧ ವಿವರವಾದ ವರದಿಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸರ್ಕಾರದ ಪತ್ರ ದಿನಾಂಕ:24.09.2019 ರಲ್ಲಿ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಸೂಚಿಸಲಾಗಿತ್ತು. ಇಂದಿರಾ ನಗರ ವಾಣಿಜ್ಯ ಸಂಕೀರ್ಣವನ್ನು ಪಿಪಿಪಿ ಯೋಜನೆಯ ಅಡಿಯಲ್ಲಿ ಪುನರಾಭಿವೃದ್ಧಿ ಪಡಿಸುವ ಕಾಮಗಾರಿಯನ್ನು ಸ್ಥಗಿತಗೊಳಿಸಿರುವ ಕುರಿತು ಪ್ರಾಧಿಕಾರವು ವಿವರವಾದ ವರದಿಯನ್ನು ಸರ್ಕಾರದ ಅವಗಾಹನೆಗೆ ಸಲ್ಲಿಸಿದ್ದು, ಇದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ: ನಅಇ 76 ಬೆಂಅಸೇ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ